# ಮರಣ ಮತ್ತು ಮರಣಾನಂತರ ಜೀವನ

## ಇಸ್ಲಾಮಿನ ದೃಷ್ಟಿಕೋನದಲ್ಲಿ

ಉಮರ್ ಅಹ್ಮದ್ ಮದನಿ

الموت والحياة بعد الموت في الإسلام

عمر أحمد المدني

"ಪ್ರತಿಯೊಂದು ಜೀವವು ಮರಣದ ರುಚಿಯನ್ನು ಅನುಭವಿಸಲಿದೆ."



### ಮರಣವು ಅತಿ ಸಮೀಪದಲ್ಲಿದೆ:

> "ನೀವೆಲ್ಲೇ ಇದ್ದರೂ ಮರಣವು ನಿಮ್ಮನ್ನು ಹಿಡಿಯುವುದು. ನೀವು ಸುಭದ್ರ ಕೋಟೆಯೊಳಗಿದ್ದರೂ ಸರಿಯೇ..."
> (ಕುರ್‌ಆನ್ 4:78)

ಮರಣವೆಂಬುದು ಯಾರೊಬ್ಬರೂ ಪಾರಾಗದಂತಹ ಒಂದು ವಾಸ್ತವಿಕತೆಯಾಗಿದೆ. ಪ್ರತಿದಿನ, ಪ್ರತಿಗಂಟೆ, ಪ್ರತಿನಿಮಿಷ ಅದು ಹತ್ತಿರ ಬರುತ್ತಿರುತ್ತದೆ. CIAಯ WORLD FACTBOOK 2007ನ ಪ್ರಕಾರ ಸರಿಸುಮಾರು ಪ್ರತಿ ಸೆಕೆಂಡಿಗೆ ಇಬ್ಬರಂತೆ ಮರಣ ಹೊಂದುತ್ತಿದ್ದಾರೆ. ಅಂದರೆ ಅದು ಪ್ರತಿವರ್ಷ 57.9 ದಶಲಕ್ಷ ಜನರನ್ನು ನುಂಗುತ್ತಿದೆ!! ಪ್ರತಿಯೊಬ್ಬ ಮನುಷ್ಯನ ಬಳಿಗೆ ಅವನ ವಯಸ್ಸು, ಆರೋಗ್ಯ, ಹಿನ್ನೆಲೆ, ಸಾಮಾಜಿಕ ಸ್ಥಾನಮಾನ ಅಥವಾ ಭಯಭಕ್ತಿ ಯಾವುದನ್ನು ಲೆಕ್ಕಿಸದೆ ಎಂದಿಗೂ ಪಾರಾಗದಂತಹ ವಿಧಿಯು ತಲುಪುತ್ತದೆ.

ಗತಕಾಲದ ರಾಜಾಧಿರಾಜರು, ಮಿಲಿಯಾಧಿಪತಿಗಳು, ಬಲಾಢ್ಯರೆಲ್ಲ ಎಲ್ಲಿ ಹೋದರು? ಒಂದಾನೊಂದು ಕಾಲದಲ್ಲಿ ಸುಂದರಾಂಗರಾಗಿದ್ದ, ಸುಪ್ರಸಿದ್ಧರಾಗಿದ್ದ, ಬುದ್ಧಿಜೀವಿಗಳಾಗಿದ್ದವರೆಲ್ಲ ಎಲ್ಲಿ ಮರೆಯಾದರು?

### ಮರಣ ಎಂಬ ವಾಸ್ತವಿಕತೆ:

ಮರಣವು ಒಂದು ದುರಂತವಲ್ಲ. ಆದರೆ ಅದು ಈ ಜಗತ್ತಿನಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಸಾಗುತ್ತಿದೆಯಷ್ಟೆ. ಜೀವನದ ಧ್ಯೇಯದ ಬಗ್ಗೆ ಚಿಂತಿಸಲು ಹಾಗೂ



ಎಚ್ಚರವಾಗಲು ಮತ್ತು ಅದರ ನಂತರ ಏನುಂಟಾಗಲಿದೆ ಎಂಬ ಬಗ್ಗೆ ಮರುಚಿಂತನೆ ನಡೆಸಲು ನಮ್ಮನ್ನು ಅದು ಪ್ರೇರಣೆ ನೀಡಬೇಕಿದೆ.

ಅಲ್ಲಾಹ್ (ಸೃಷ್ಟಿಕರ್ತ) ನಮ್ಮನ್ನು ಕೇವಲ ಅವನು ಏಕೈಕನ ಆರಾಧನೆಗೋಸ್ಕರ ಸೃಷ್ಟಿಸಿದ್ದಾನೆಂದು ಖುರ್‌ಆನ್‌ನಲ್ಲಿ ನಮಗೆ ತಿಳಿಸಿದ್ದಾನೆ. ಪ್ರಸ್ತುತ ಉದ್ದೇಶವನ್ನು ಈಡೇರಿಸುವವನು ಯಾರೆಂದು ನೋಡಲಿಕ್ಕಾಗಿ ಅವನು ಈ ಜೀವನವನ್ನು ಒಂದು ಪರೀಕ್ಷೆಯನ್ನಾಗಿ ನಿಶ್ಚಯಿಸಿರುವನು.

**"ನನ್ನ ಆರಾಧನೆಗೋಸ್ಕರವಲ್ಲದೆ ನಾನು ಜಿನ್ನ್‌ಗಳನ್ನಾಗಲಿ, ಮನುಷ್ಯರನ್ನಾಗಲಿ ಸೃಷ್ಟಿಸಿಲ್ಲ..." (ಕುರ್‌ಆನ್ 51:56)**

ಸೃಷ್ಟಿಕರ್ತನು ಮರಣ ಹಾಗೂ ಜೀವನದ ಸೃಷ್ಟಿಯ ಉದ್ದೇಶವನ್ನು ಹೀಗೆ ವಿವರಿಸುತ್ತಾನೆ:

**"ನಿಮ್ಮ ಪೈಕಿ ಉತ್ತಮ ಕರ್ಮವೆಸಗುವವರು ಯಾರೆಂದು ಪರೀಕ್ಷಿಸುವ ಸಲುವಾಗಿ ಅವನು ಮರಣ ಮತ್ತು ಜೀವನವನ್ನು ಸೃಷ್ಟಿಸಿದನು." (ಕುರ್‌ಆನ್ 67:2)**

ಒಬ್ಬನು ಮರಣಕ್ಕಾಗಿ ಸಿದ್ಧನಾಗುವುದೆಂದರೆ ತನ್ನ ಮರಣೋತ್ತರ ಕ್ರಿಯೆಗಳಿಗೆ ಮೊದಲೇ ಹಣ ಪಾವತಿಸುವುದು ಇಲ್ಲವೇ ಕಫನ್ (ಮೃತರಿಗೆ ತೊಡಿಸುವ) ಬಟ್ಟೆಗಳನ್ನು ಮೊದಲೇ ಖರೀದಿಸಿಡುವುದಲ್ಲ. ವಸ್ತುತಃ ಅದು ಒಬ್ಬನು ತನ್ನ ಜೀವನದ ಉದ್ದೇಶವಾದ ಆ ಅಲ್ಲಾಹ್ ಏಕೈಕನನ್ನು

ಆರಾಧಿಸುವುದು, ಅವನ ಆಜ್ಞೆಗಳ ಪ್ರಕಾರ ಜೀವನ ನಡೆಸುವುದು ಹಾಗೂ ಸತ್ಕರ್ಮಗಳನ್ನು ಮಾಡುವುದಾಗಿದೆ. ಇಸ್ಲಾಮಿನಲ್ಲಿ ಆರಾಧನೆಯ ಕಲ್ಪನೆಯು ಎಲ್ಲವನ್ನು ಒಳಗೊಂಡಿರುವುದರಿಂದ ಅದು ಕೇವಲ ನಮಾಝ್‌ಗೆ ಮಾತ್ರ ಸೀಮಿತವಾಗಿರುವುದಿಲ್ಲ. ಇಲ್ಲಿ ಅಲ್ಲಾಹುವನ್ನು ಸಂತೃಪ್ತಿಗೊಳಿಸುವ ಯಾವುದೇ ಕರ್ಮವು ಆರಾಧನೆಯಾಗಿ ಪರಿಗಣಿಸಲಾಗುತ್ತದೆ ಹಾಗೂ ಆ ಕರ್ಮವೆಸಗಿದವನಿಗೆ ಪ್ರತಿಫಲ ಲಭಿಸುತ್ತದೆ.

> **"ಪ್ರತಿಯೊಂದು ವ್ಯಕ್ತಿಯು ತಾನು ನಾಳೆಗಾಗಿ ಏನನ್ನು ಕಳುಹಿಸಿದ್ದೇನೆಂಬುದನ್ನು ನೋಡಲಿ..."**
> **(ಕುರ್‌ಆನ್ 59:18)**

ಪ್ರತಿದಿನ ನಾವು ಮರಣದ ಹಲವು ಉದಾಹರಣೆಗಳನ್ನು ಕಾಣುತ್ತಿರುತ್ತೇವೆ. ಯಾವುದೇ ನೋವು ಅಥವಾ ಗದ್ದಲವಿಲ್ಲದೆ ಒಬ್ಬನು ಮೃತನಾಗುವುದನ್ನು ಕಂಡರೆ ನಾವು ಶಾಂತರೀತಿಯ ಮರಣವೆಂಬುದಾಗಿ ಭಾವಿಸುತ್ತೇವೆ. ನಿಜವಾಗಿ ಇಲ್ಲಿ ನಾವು ಅಂದುಕೊಂಡಂತೆಯೇ ಆಗಬೇಕೆಂದೇನಿಲ್ಲ. ಒಬ್ಬ ವ್ಯಕ್ತಿ ಮರಣಹೊಂದುವಾಗ ಆತ್ಮವು ದೇಹದಿಂದ ಬೇರ್ಪಡುತ್ತದೆ. ಹೀಗಿರುವಾಗ ಆತ್ಮದ ಅವಸ್ಥೆಯು ಹೇಗಿತ್ತೆಂದು ಮೃತ (ಭೌತಿಕ) ಶರೀರದಲ್ಲಿ ಕಂಡುಬರಲಾರದು. ಆತ್ಮದ ಶಾಂತತೆ ಅಥವಾ ಅಸ್ವಸ್ಥತೆಯು ಒಬ್ಬ ವ್ಯಕ್ತಿಯು ತನ್ನ ಇಹಲೋಕ ಜೀವನದ ಉದ್ದೇಶವನ್ನು ಹೇಗೆ ಪೂರ್ತೀಕರಿಸಿದ್ದಾನೆ ಎಂಬುದನ್ನು ಅವಲಂಬಿಸಿರುತ್ತದೆ. ಮಾತ್ರವಲ್ಲ ಆತ್ಮದ ಯಾವುದೇ ಸ್ಥಿತಿಗೂ ಮರಣ ಕಾರಣಕ್ಕೂ ಏನೂ ಸಂಬಂಧವಿರುವುದಿಲ್ಲ.

ಏಕಮುಖ ಯಾತ್ರೆಗೆ ಮಾತ್ರ ಟಿಕೆಟನ್ನು ಹೊಂದಿರುವ ಇಬ್ಬರು ವ್ಯಕ್ತಿಗಳ ಉದಾಹರಣೆಯನ್ನು ತೆಗೆದುಕೊಳ್ಳಿ. ಅವರಿಬ್ಬರೂ ತಮ್ಮ ಗುರಿ ತಲುಪುವ ಸ್ಥಳಕ್ಕೆ ಮುಂಚೆ ಹೋದವರೂ ಅಲ್ಲ. ಒಬ್ಬಾತ ಅಲ್ಲಿನ ಭಾಷೆ, ಸಂಸ್ಕೃತಿ, ಜನರ ನಡೆನುಡಿಗಳನ್ನು ಕಲಿಯಲು ಸಮಯ ತೆಗೆದುಕೊಳ್ಳುತ್ತಾನೆ. ಅವನು ಅಲ್ಲಿನ ಕರೆನ್ಸಿಗಳನ್ನು ಪಡೆದಿದ್ದಾನೆ ಮಾತ್ರವಲ್ಲ ವೈದ್ಯಕೀಯ ಪರೀಕ್ಷೆಗಳನ್ನೂ ಮಾಡಿಸಿದ್ದಾನೆ. ಹಾಗೆಯೇ ಪ್ರಯಾಣದ ಸಮಯ ಬಂದಾಗ ಯಾವುದೇ ದಿಗ್ಭ್ರಮೆಗಳಿಲ್ಲದೆ ಅಲ್ಲಿ ಬಂದಿಳಿಯುತ್ತಾನೆ. ಅವನು ಸುರಕ್ಷಿತ ಮತ್ತು ಸಂತೃಪ್ತನಾಗಿರುತ್ತಾನೆ. ಏಕೆಂದರೆ ಅವನು ಸಿದ್ಧತೆಗಾಗಿ ಸಾಕಷ್ಟು ಸಮಯವನ್ನು ವ್ಯಯಿಸಿದ್ದಾನೆ.

ಇದಕ್ಕೆ ತದ್ವಿರುದ್ಧವಾಗಿ, ಇನ್ನೊಬ್ಬ ತನ್ನ ಸಿದ್ಧತೆಗಳ ಕುರಿತು ಅಲಕ್ಷ್ಯನಾಗಿದ್ದನು ಮತ್ತು ತಾನು ಯಾತ್ರೆಗೆ ಹೋಗುವ ದಿನವನ್ನು ಕಾಯುತ್ತಾ ಹೀಗೆಯೇ ಕಾಲ ಕಳೆದಿದ್ದನು. ಅವನು ತನಗೆ ಪರಿಚಿತವಲ್ಲದ ಒಂದು ಸ್ಥಳಕ್ಕೆ ದಿಗ್ಭ್ರಮೆ ಹಾಗೂ ಗೊಂದಲದೊಂದಿಗೆ ಬಂದಿಳಿಯುತ್ತಾನೆ. ಅವನು ಸಿದ್ಧತೆ ಮಾಡಿಕೊಳ್ಳದಿರುವುದು ಅವನನ್ನು ಭಯಾನಕ ವಿಧಿಗೆ ತಳ್ಳಿ ಬಿಡುತ್ತದೆ. ಅವನು ತನ್ನೊಂದಿಗೆ ತಂದ ವಸ್ತುಗಳಾವುದೂ ಅವನಿಗೆ ಒಂದಿಷ್ಟೂ ಪ್ರಯೋಜನಕ್ಕೆ ಬರುವುದಿಲ್ಲ. ಇಂತಹ ಅಲಕ್ಷ್ಯ ವ್ಯಕ್ತಿಯ ಬಗ್ಗೆ ವಿವರಿಸುತ್ತಾ ಕುರ್‌ಆನ್ ಹೀಗೆ ಹೇಳುತ್ತದೆ:

**"ಕೊನೆಗೆ ಅವರಲ್ಲಿ ಯಾರಿಗಾದರೂ ಮರಣವು ಬಂದುಬಿಟ್ಟರೆ ಅವನು ಹೇಳುತ್ತಾನೆ: ನನ್ನ ಪಾಲಕಪ್ರಭುವೇ, ನನ್ನನ್ನು ಮರಳಿಸಿಬಿಡು. ನಾನು ತೊರೆದುಬಿಟ್ಟಿರುವ ಸತ್ಕರ್ಮಗಳನ್ನು ನಾನು ಮಾಡುವೆನು. ಎಂದಿಗೂ ಹಾಗಾಗದು. ಇದಂತು ಅವನು ಹೇಳಿಬಿಡುವ ಒಂದು ಮಾತು ಮಾತ್ರವಾಗಿದೆ." (ಕುರ್‌ಆನ್ 23:99–100)**

ಅದೇ ರೀತಿ ನರಕಕ್ಕೆ ಅರ್ಹರಾದಂತಹ ಜನರಲ್ಲಿ ಅಲ್ಲಿಗೆ ನಿಮ್ಮನ್ನು ತಲುಪಿಸಿರುವುದಾದರೂ ಏನು ಎಂದು ಕೇಳಲಾಗುವಾಗ ಅವರು ಮಾಡುವ ರೋದನವನ್ನೂ ಗಮನಿಸಿರಿ;

**"ಅವರು ಹೇಳುವರು: ನಾವು ನಮಾಝ್ ಮಾಡುವವರಾಗಿರಲಿಲ್ಲ. ನಾವು ನಿರ್ಗತಿಕರಿಗೆ ಆಹಾರ ನೀಡುವವರೂ ಆಗಿರಲಿಲ್ಲ ಮತ್ತು ನಾವು ವ್ಯರ್ಥ ಮಾತುಗಳನ್ನಾಡುವವರ ಜೊತೆ ಸೇರಿ ವ್ಯರ್ಥ ಮಾತುಗಳಲ್ಲಿ ತಲ್ಲೀನರಾಗಿರುತ್ತಿದ್ದೆವು ಮತ್ತು ನಾವು ಪ್ರತಿಫಲ ದಿನವನ್ನು ನಿಷೇಧಿಸುತ್ತಿದ್ದೆವು. ಕೊನೆಗೆ ಖಚಿತವಾದ ಮರಣವು ನಮಗೆ ಬಂದುಬಿಟ್ಟಿತು." (ಕುರ್‌ಆನ್ 74:43–47)**

ನಮಗೆಲ್ಲರಿಗೂ ಮರಣದ ಒಂದು ನಿಶ್ಚಿತ ಸಮಯವಿದೆ. ನಾವು ನಮಗೆ ಪರಿಚಿತವಲ್ಲದ ಆ ಸ್ಥಳಕ್ಕೆ ಯಾತ್ರೆ ಹೊರಡಲಿದ್ದೇವೆ. ನೀವು ಸ್ವತಃ ನಿಮ್ಮೊಂದಿಗೆ ಕೇಳಿರಿ: ತಾನು ಅದಕ್ಕಾಗಿ ಸಿದ್ಧನಾಗಿದ್ದೇನೆಯೇ?

## ಜೀವನದ ಧ್ಯೇಯ:

ಮರಣದೊಂದಿಗೆ ಕೊನೆಗೊಳ್ಳುವ ಪರೀಕ್ಷೆಯಾಗಿದೆ ಜೀವನ. ಆದರೆ ಅದು ಒಬ್ಬನ ಅಸ್ತಿತ್ವದ ಕೊನೆಯೆಂಬುದನ್ನು ಸೂಚಿಸುವುದಿಲ್ಲ. ಒಬ್ಬನಿಗೆ ಮರಣವು ಬಂದು ಬಿಟ್ಟರೆ ಅವನಿಗೆ ಒಳಿತುಗಳನ್ನು ಮಾಡಲಿಕ್ಕಿರುವ ಅವಕಾಶವು ಮುಗಿಯಿತೆಂದರ್ಥ. ಆಗ ನಾವು ಪಶ್ಚಾತ್ತಾಪ ಪಡೋಣವೆಂದರೆ ನಮ್ಮ ಪಾಲಿಗೆ ತುಂಬಾ ತಡವಾಗಿ ಬಿಟ್ಟಿರುತ್ತದೆ ಮತ್ತು ನಮ್ಮ ಈ ಜೀವನದಲ್ಲಿ ನಾವು ಹೊಂದಿರುವ ನಂಬಿಕೆ ಹಾಗೂ ಕರ್ಮಗಳನ್ನು ಆಧರಿಸಿ ಮಾತ್ರ ನಮ್ಮ ವಿಧಿಯು ನಿಶ್ಚಯಿಸಲಾಗಿರುತ್ತದೆ. ಮನುಷ್ಯನ ಜೀವನವು ಎರಡು ಭಾಗಗಳಾಗಿ ವಿಂಗಡಿಸಲಾಗಿರುತ್ತದೆ. ಒಂದು ಅಲ್ಪಾವಧಿಯ ಐಹಿಕ ಜೀವನ ಹಾಗೂ ಇನ್ನೊಂದು ಶಾಶ್ವತವಾದ ಮರಣಾನಂತರ ಜೀವನ. ಈ ಇಹಲೋಕ ಜೀವನದ ಹ್ರಸ್ವ ಕಾಲದ ಸುಖಗಳಿಗಿಂತ ಶಾಶ್ವತ ಅನುಗ್ರಹ ಸಮೃದ್ಧಿಗಳೇ ಅದೆಷ್ಟೋ ಫಲಕಾರಿಯೆಂದು ಯಾವುದೇ ಆರೋಗ್ಯಪೂರ್ಣ ಬುದ್ಧಿಯು ತೀರ್ಪು ನೀಡಿಬಿಡುತ್ತದೆ.

**ನಾವು ನಿಮ್ಮನ್ನು ಹೀಗೆಯೇ ನಿರರ್ಥಕವಾಗಿ ಸೃಷ್ಟಿಸಿದ್ದೇವೆಂದು ಮತ್ತು ನೀವು ನಮ್ಮೆಡೆಗೆ ಮರಳಿಸಲಾಗುವುದೇ ಇಲ್ಲವೆಂದು ಭಾವಿಸಿದ್ದೀರೇನು? (ಕುರ್‌ಆನ್ 23:115)**

ಅಲ್ಲಾಹ್ ಮನುಕುಲವನ್ನು ಸೃಷ್ಟಿಸಿ ನಮಗೆ ಆಯ್ಕೆಯ ಸ್ವಾತಂತ್ರ್ಯವನ್ನು ಹಾಗೂ ಸತ್ಯ ಮತ್ತು ಅಸತ್ಯವನ್ನು ಬೇರ್ಪಡಿಸಿ ಅರಿಯುವ ಬುದ್ಧಿಯನ್ನು ನೀಡಿ ನಮ್ಮ ಕರ್ಮಗಳಿಗೆ ನಮ್ಮನ್ನೇ ಹೊಣೆಗಾರರನ್ನಾಗಿಸಿದ್ದಾನೆ. ನಮ್ಮ ಒಳಿತುಗಳಿಗೆ ಪ್ರತಿಫಲ ನೀಡುವ, ಕೆಡುಕುಗಳಿಗೆ ಶಿಕ್ಷೆ ನೀಡುವ ಮರಣಾನಂತರ ಜೀವನವು ಇಲ್ಲವೆಂದಾದರೆ ಅಲ್ಲಾಹುವಿನ ಪರಿಪೂರ್ಣ ನ್ಯಾಯವು ವಿರೋಧಾಭಾಸವಾಗಿ ಬಿಡುತ್ತದೆ.

ಹೀಗಿರುವಾಗ ನ್ಯಾಯದ ಪರಿಪೂರ್ಣ ಬೇಡಿಕೆಯೇನೆಂದರೆ ಪ್ರತಿಯೊಂದು ಆತ್ಮವು ಸಹ ವಿಚಾರಣೆಯನ್ನೆದುರಿಸುವ ಒಂದು ಅಂತಿಮ ತೀರ್ಪಿನ ದಿನವಿರಬೇಕೆಂದೇ ಆಗಿದೆ.

**ಏನು; ನಾವು ವಿಶ್ವಾಸಿಗಳಾದ ಜನರನ್ನು ಪಾಪಿಗಳಂತೆ ನೋಡುತ್ತೇವೆಯೇ? ನಿಮಗೇನಾಗಿಬಿಟ್ಟಿದೆ? ನೀವು ಹೇಗೆ ತೀರ್ಪು ನೀಡುತ್ತಿರುವಿರಿ?**
**(ಕುರ್‌ಆನ್ 68:35–36)**

## ಅಂತಿಮ ತೀರ್ಪಿನ ದಿನ:

ಇಹಲೋಕದಲ್ಲಿ ಪ್ರತಿಯೊಬ್ಬರೂ ಮಾಡಿರುವ ಕರ್ಮಗಳು ಯಾವುದೇ ಪ್ರಮಾದವಿಲ್ಲದೆ ದಾಖಲಾಗಿರುತ್ತವೆ ಮತ್ತು ಸುರಕ್ಷಿತವಾಗಿರುತ್ತವೆ.

**“ಮತ್ತು ಕರ್ಮಫಲ ಗ್ರಂಥವನ್ನು ಮುಂದಿಡಲಾಗುವುದು. ಆಗ ನೀನು ಅಪರಾಧಿಗಳನ್ನು ಅದರಲ್ಲಿರುವುದರ ನಿಮಿತ್ತ ಭಯವಿಹ್ವಲರಾಗುತ್ತಿರುವುದನ್ನು ಕಾಣುವೆ ಮತ್ತು ಹೇಳುತ್ತಿರುವರು: ಅಯ್ಯೋ, ನಮ್ಮ ದುರ್ಗತಿಯೇ, ಇದೆಂತಹ ಗ್ರಂಥ! ಚಿಕ್ಕದಿರಲಿ, ದೊಡ್ಡದಿರಲಿ ಯಾವೊಂದನ್ನೂ ಇದು ದಾಖಲಿಸದೆ ಬಿಟ್ಟಿಲ್ಲವಲ್ಲ ಮತ್ತು ಅವರು ಎಸಗಿದವುಗಳನ್ನೆಲ್ಲಾ ಅದರಲ್ಲಿ ಕಾಣುವರು ಹಾಗೂ ನಿನ್ನ ಪಾಲಕಪ್ರಭುವು ಯಾರ ಮೇಲೂ ಅನ್ಯಾಯ, ಅಕ್ರಮವನ್ನು ಮಾಡಲಾರನು.” (ಕುರ್‌ಆನ್ 18:49)**

**“ತಾವು ಹೇಳಿರಿ: ಯಾವ ಮರಣದಿಂದ ನೀವು ಓಡಿಹೋಗುತ್ತಿರುವಿರೋ ಅದಂತು ನಿಮ್ಮನ್ನು ತಲುಪಿಯೇ ಬಿಡಲಿದೆ. ಆ ಬಳಿಕ ನೀವೆಲ್ಲರೂ ಸಕಲ ರಹಸ್ಯ ಬಹಿರಂಗಗಳನ್ನು ಅರಿಯುವವನ (ಅಲ್ಲಾಹುವಿನ) ಕಡೆಗೆ ಮರಳಿಸಲಾಗುವಿರಿ. ಆಗ ನೀವು ಮಾಡಿದ್ದಂತಹ ಸಕಲ ಕರ್ಮಗಳನ್ನು ಅವನು ನಿಮಗೆ ಅರಿಯಿಸುವನು.” (ಕುರ್‌ಆನ್ 62:8)**

ನಮ್ಮ ಸಕಲ ಕರ್ಮಗಳ ಆ ನಿಖರವಾದ ದಾಖಲೆಯನ್ನು ಕಾಣುವಾಗ ಅಂದರೆ ನಾವು ಎಂದೋ ಮರೆತುಬಿಟ್ಟ ವಿಷಯಗಳನ್ನು ನಮಗೆ ನೆನಪಿಸಿಕೊಡಲಾಗುವಾಗ ನಾವು ದಿಗ್ಭ್ರಾಂತರಾಗಿಬಿಡುವೆವು. ಅಲ್ಲಾಹು ಹೇಳುತ್ತಾನೆ:

**“ಅವರು ಅದನ್ನು ಮರೆತುಬಿಟ್ಟಿದ್ದರು ಮತ್ತು ಅಲ್ಲಾಹು ಎಲ್ಲಾ ಸಂಗತಿಗಳ ಅರಿವುಳ್ಳವನಾಗಿರುವನು.”**
**(ಕುರ್‌ಆನ್ 58:6)**

ಇದನ್ನು ಆಳವಾಗಿ ಚಿಂತಿಸಿದರೆ ಯಾವುದೇ ಪಾಪವನ್ನು ಮಾಡುವಾಗ ಅದು ನಮ್ಮ ವಿರುದ್ಧ ದಾಖಲಾಗುತ್ತಿದೆ ಹಾಗೂ ಅಂತ್ಯದಿನದಲ್ಲಿ ಬಹಿರಂಗಗೊಳಿಸಲಾಗಲಿದೆ ಎಂಬ ಅರಿವಿನ ಕಾರಣದಿಂದ ಅದನ್ನೆಸಗುವಾಗ ನಮಗೆ ನಾಚಿಕೆಯಾಗಬೇಕು.

ಪುನರುತ್ಥಾನಗೊಳಿಸಿ ತಮ್ಮ ವಿರುದ್ಧ ತೀರ್ಪು ನೀಡುವ ಅಲ್ಲಾಹುವಿನ ಸಾಮರ್ಥ್ಯದ ಬಗ್ಗೆ ಕೆಲವರು ಸಂಶಯ ಪಡುವುದರ ಕುರಿತು ಅಲ್ಲಾಹು ಸತ್ಯನಿಷೇಧಿಗಳ ಮಾತುಗಳನ್ನು ಹೀಗೆ ಉಲ್ಲೇಖಿಸುತ್ತಾನೆ:

**"ಆ ಶಿಥಿಲವಾದ ಮೂಳೆಗಳನ್ನು ಜೀವಂತಗೊಳಿಸುವವನಾರು? ತಾವು ಹೇಳಿರಿ: ಅದನ್ನು ಮೊದಲ ಬಾರಿಗೆ ಯಾರು ಸೃಷ್ಟಿಸಿದನೋ ಅವನು ಅದಕ್ಕೆ ಜೀವವನ್ನು ನೀಡುವನು. ಅವನು ಸಕಲ ವಿಧದ ಸೃಷ್ಟಿಗಳ ಕುರಿತು ಚೆನ್ನಾಗಿ ಅರಿವುಳ್ಳವನಾಗಿದ್ದಾನೆ." (ಕುರ್‌ಆನ್ 36:78–79)**

## ಸ್ವರ್ಗ ಮತ್ತು ನರಕ

ಆರಾಧನೆಗೆ ಏಕೈಕ ಅರ್ಹನೆಂದು ಅಲ್ಲಾಹುವಿನ ಮೇಲೆ ವಿಶ್ವಾಸ ಹೊಂದಿರುವ ಹಾಗೂ ಸತ್ಕರ್ಮಗಳನ್ನು ಮಾಡುತ್ತಿರುವವರಿಗೆ ಸ್ವರ್ಗ ಪ್ರಾಪ್ತವಾಗುತ್ತದೆ. ಅಲ್ಲಾಹು ಹೇಳಿರುವುದಾಗಿ ಪ್ರವಾದಿ ಮುಹಮ್ಮದ್(ಸ)ರವರು ಹೀಗೆ ನುಡಿದಿದ್ದಾರೆ:

"ನಾನು ನನ್ನ ಸಜ್ಜನ ದಾಸರಿಗಾಗಿ ಎಂತಹ ಉತ್ಕೃಷ್ಟ ವಸ್ತುಗಳನ್ನು ಸಿದ್ಧಪಡಿಸಿಟ್ಟಿದ್ದೇನೆಂದರೆ ಯಾವುದೇ ಕಣ್ಣುಗಳು ಅವುಗಳನ್ನು ಕಂಡಿರಲಾರವು, ಯಾವುದೇ ಕಿವಿಗಳು ಅವುಗಳ ಬಗ್ಗೆ ಕೇಳಿರಲಾರವು. ಯಾವುದೇ ಮಾನವ ಹೃದಯವು ಅವುಗಳ ಬಗ್ಗೆ ಚಿಂತಿಸಿರಲಾರವು."

**"ಸ್ವರ್ಗವಾಸಿಗಳು ಅಂದು ಮನೋಲ್ಲಾಸದ ಕೆಲಸದಲ್ಲಿ ನಿರತರಾಗಿರುವರು. ಅವರು ಮತ್ತು ಅವರ ಪತ್ನಿಯರು ನೆರಳುಗಳಲ್ಲಿ ಅಲಂಕೃತವಾದ ಮಂಚಗಳಲ್ಲಿ ದಿಂಬುಗಳನ್ನಿಟ್ಟು ಕುಳಿತಿರುವರು. ಸ್ವರ್ಗದಲ್ಲಿ ಅವರಿಗೆ ವಿವಿಧ ಬಗೆಯ ಫಲಗಳಿರುವುವು ಮತ್ತು ಇನ್ನಷ್ಟು ಅವರು ಬೇಡುವುದೂ ಸಹ." (ಕುರ್‌ಆನ್ 36: 55–57)**

ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹುವಿನ ಏಕೈಕತೆಯನ್ನು ನಿಷೇಧಿಸಿದವರೊಂದಿಗೆ ಹೀಗೆ ಹೇಳಲಾಗುವುದು:

**"ಇದುವೇ ನಿಮಗೆ ಮುನ್ನೆಚ್ಚರಿಕೆ ನೀಡಲಾಗುತ್ತಿದ್ದಂತಹ ಆ ನರಕವಾಗಿದೆ. ನೀವು ನಿಮ್ಮ ಸತ್ಯನಿಷೇಧದ ಫಲವನ್ನುಣ್ಣಲಿಕ್ಕಾಗಿ ಇಂದು ನೀವು ಇದರೊಳಗೆ ಪ್ರವೇಶಿಸಿಕೊಳ್ಳಿರಿ." (ಕುರ್‌ಆನ್ 36:63–64)**

ಸತ್ಯನಿಷೇಧಿಗಳಿಗೆ ಇರುವ ಶಿಕ್ಷೆಗಳು ಅತ್ಯಂತ ನಿಕೃಷ್ಟವಾಗಿರುತ್ತವೆ:

**"ನಿಸ್ಸಂದೇಹವಾಗಿಯೂ ನರಕಾಗ್ನಿಯು ಹೊಂಚುಹಾಕಿ ಕುಳಿತಿದೆ. ಅತಿಕ್ರಮಿಗಳ ನೆಲೆಯು ಅದುವೇ ಆಗಿದೆ.**

**ಅವರು ಅದರಲ್ಲಿ ಯುಗಯುಗಗಳ ವರೆಗೆ ಬಿದ್ದಿರುವರು. ತಂಪಿನ ಸವಿಯನ್ನಾಗಲಿ, ನೀರಿನ ಸವಿಯನ್ನಾಗಲಿ ಅವರೆಂದೂ ನೋಡಲಾರರು. ಅತ್ಯುಷ್ಣತೆಯ ನೀರು ಮತ್ತು (ಹರಿಯುವ) ಕೀವಿನ ಹೊರತು. (ಅವರಿಗೆ) ಸಂಪೂರ್ಣ ಪ್ರತಿಫಲ ಲಭಿಸುವುದು. ಅವರಿಗಂತು ಲೆಕ್ಕವಿಚಾರಣೆಯ ನಿರೀಕ್ಷೆಯೇ ಇರಲಿಲ್ಲ. ಅವರು ನಿರ್ಭಯಚಿತ್ತರಾಗಿ ನಮ್ಮ ಸೂಕ್ತಿಗಳನ್ನು ನಿಷೇಧಿಸುತ್ತಿದ್ದರು. ನಾವು ಸಕಲ ವಿಷಯಗಳನ್ನು ದಾಖಲಿಸಿ ಲೆಕ್ಕ ಮಾಡಿಟ್ಟಿರುವೆವು. ಇನ್ನು ನೀವು (ನಿಮ್ಮ ಕರ್ಮಗಳ) ಸವಿಯನ್ನುಣ್ಣಿರಿ. ನಾವು ನಿಮ್ಮ ಶಿಕ್ಷೆಯನ್ನೇ ಹೆಚ್ಚಿಸುತ್ತಿರುವೆವು." (ಅಲ್‌ಕುರ್‌ಆನ್ 78: 21–30)**

**"ನಿಶ್ಚಯವಾಗಿಯೂ ಸತ್ಕರ್ಮಿಗಳು (ಸ್ವರ್ಗದ ಸುಖಾನುಭೂತಿ ಹಾಗೂ) ಅನುಗ್ರಹಗಳಲ್ಲಿರುವರು ಮತ್ತು ಖಂಡಿತವಾಗಿಯೂ ದುಷ್ಕರ್ಮಿಗಳು ನರಕಾಗ್ನಿಯಲ್ಲಿರುವರು." (ಕುರ್‌ಆನ್ 82:13–14)**

## ಪರಿಸಮಾಪ್ತಿ:

**"ಹೇ ಮನುಷ್ಯಾ! ನಿನ್ನನ್ನು ನಿನ್ನ ಮಹಾ ಉದಾರಿಯಾದ ಪಾಲಕಪ್ರಭುವಿನಿಂದ ವಂಚಿಸಿದ ಆ ವಸ್ತು ಯಾವುದು? ಅವನು (ಪಾಲಕಪ್ರಭು) ನಿನ್ನನ್ನು ಸೃಷ್ಟಿಸಿದನು, ಬಳಿಕ ನಿನ್ನನ್ನು ಸರಿಯಾದ ವಿಧದಲ್ಲಾಗಿಸಿದನು. ಅನಂತರ (ನೇರವಾಗಿಸಿದನು ಮತ್ತು) ಸಂತುಲಿತಗೊಳಿಸಿದನು. ಅವನು ತಾನಿಚ್ಛಿಸಿದ ಸ್ವರೂಪದಲ್ಲಿ ನಿನ್ನನ್ನು ಜೋಡಿಸಿದನು. ಎಂದಿಗೂ ಇಲ್ಲ, ಆದರೆ ನೀವಂತು ರಕ್ಷೆ-ಶಿಕ್ಷೆಯ ದಿನವನ್ನು ಸುಳ್ಳಾಗಿಸುತ್ತಿರುವಿರಿ." (ಕುರ್‌ಆನ್ 82:6–9)**

ಮರಣವು ಎಂದಿಗೂ ತಪ್ಪಿಸಲಾಗದಂತಹುದು. ನಮ್ಮ ಜೀವನದಲ್ಲಿರುವ ಉದ್ದೇಶವೇ ಆ ಏಕೈಕ ಅಲ್ಲಾಹವನ್ನು ಆರಾಧಿಸುವುದು; ಒಳಿತಿನ ಕರ್ಮಗಳನ್ನು ಮಾಡುವುದು ಹಾಗೂ ನಿಷಿದ್ಧ ಸಂಗತಿಗಳನ್ನು ತೊರೆಯುವುದಾಗಿದೆ. ನಮ್ಮ ಈಗಿನ ಕರ್ಮಗಳಾಧಾರದಲ್ಲಿ ನಮ್ಮ ವಿಧಿಯು ನಿಶ್ಚಯವಾಗಿರುತ್ತದೆ. ಸ್ವರ್ಗದಲ್ಲಿ ಶಾಶ್ವತ ಭವನವು ನಮ್ಮದಾಗ ಬೇಕಿದ್ದರೆ ನಮಗೆ ಸಿಕ್ಕಂತಹ ಅವಕಾಶಗಳನ್ನು ಸದುಪಯೋಗಪಡಿಸಿ ಅದನ್ನು ಖಾತರಿ ಪಡಿಸಬೇಕಾಗುತ್ತದೆ. ಇಲ್ಲವೇ ನಮಗೆ ಅವುಗಳನ್ನು ವ್ಯರ್ಥವಾಗಿ ಬಿಡಬಹುದು ಹಾಗೂ ಸ್ವತಃ ನಮ್ಮನ್ನೇ ನರಕಾಗ್ನಿಗೆ ಎಸೆದು ಶಾಶ್ವತ ಶಿಕ್ಷೆಗೆ ಅರ್ಹರನ್ನಾಗಿಸಬಹುದು. ಚಿಂತಿಸಲಿಕ್ಕಿದು ಸಕಾಲ. ಈಗಿಲ್ಲದಿದ್ದರೆ ಮತ್ತೆಂದೂ ಇಲ್ಲ.

**ಪ್ರಕಟಣೆ:**
**ಕರ್ನಾಟಕ ಸಲಫಿ ಅಸೋಸಿಯೇಶನ್**
**ರಿಯಾದ್, ಸೌದಿ ಅರೇಬಿಯ**
**0544387673 / 0507937093**
**Email: ksariyadh@ymail.com**